Regd No B.G. 155 Sn 16—1—1965

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

ಸ್ಥಾಪಕರು— ಅರಮನೆ ಸಿರಸ್ತೆದಾರ್ ಎಂ ವಿ ಸುಬ್ಬರಾಯರು 2ನೆ]

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ಸಂಬಳ ತೆಗೆದುಕೊಳ್ಳುಲ್ಲ

ಭಾರತ ಆಹಾರ ಕಾರ್ಪೋರೇಷನ್ನಿನ ಅಧ್ಯಕ್ಷರು ಶ್ರೀ ಟಿ ಎ ಪೈ ರವರು ತಮ್ಮ ಕೆಲಸಕ್ಕಾಗಿ ಯಾವ ಸಂಬಳವನೂ ತೆಗೆದುಕೊಳ್ಳುವುದಿಲ್ಲವೆಂದು ಭಾರತದ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಇಲ್ಲಿ ಹೇಳಿದರು

★

ಡಿಪೋಗಳ ಆರಂಭ

ಬೆಂಗಳೂರು— ಪಠ್ಯಪುಸ್ತಕಗಳನ್ನು ದಾಸ್ತಾನು ಮಾಡು ಹಂಚಿಕೆ ಮಾಡಲು 10 ಡಿಪೋಗಳನ್ನು ತೆರೆಯಲಾಗುವುದು ವಿದ್ಯಾಮಂತ್ರಿ ಶ್ರೀ ಕಂಠಿಯವರು ಹೇಳಿದರು

★

ಸಭೆ ತ್ಯಾಗ

ಸಾಗರ— ಸೋಮವಾರ ಪೌರ ಸಭೆಯಲ್ಲಿ ಅಧ್ಯಕ್ಷರು ರೂಲಿಂಗ್ಸಿಗೆ ಕನ್ನಡದಲ್ಲಿ ಕೊಡಬೇಕೆಂದು ಸದಸ್ಯರು ತಿಳಿಸಿದರೂ ಅವರು ಹಾಗೆ ಮಾಡದೆ ಇಂಗ್ಲೀಷಿನಲ್ಲಿ ಕೊಟ್ಟಿದ್ದರಿಂದ ಪ್ರತಿಭಟಿಸಿ ವಿರೋಧ ಸದಸ್ಯರು ಸಭಾ ಪರಿತ್ಯಾಗ ಮಾಡಿದರು

★

ಸ್ವಾಗತ ಸಮಿತಿ ರಚನೆ

ಕಾರವಾರ— ಈಚೆಗೆ ನಡೆದ ಇಲ್ಲಿಯ ಕರ್ನಾಟಕ ಸಂಘವು ಏಪ್ರಿಲ್—ಮೇ ತಿಂಗಳಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 80 ಜನರ ಸ್ವಾಗತ ಸಮಿತಿಯನ್ನು ನೇಮಿಸಿತು.

ನಾಳೆಯ ಪಂಚಾಂಗ

ದೈವಜ್ಞಶಿಖಾಮಣಿ
ಆಸ್ಥಾನ ಮಹಾವಿದ್ವಾನ್, ಧರ್ಮಾಧಿಕಾರಿ
ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

17 ಭಾನುವಾರ ಪೂರ್ಣಾಮಾ ಪುನರ್ವಸು

ಯೋಜನಾ ಸಮಿತಿಯ ಕರೆ

ನವದೆಹಲಿ— ಯೋಜನಾ ಸಮಿತಿಯು ತಾತ್ಕಾಲಿಕ ಅವಶ್ಯಕತೆಗೆ ಸಂಬರುವಂತೆ 1956 ರ ಕೈಗಾರಿಕಾ ನೀತಿಯ ರಂತಾವನ್ನು ಪುನರ್ವಿಮರ್ಶಿಸಲು ಕರೆ ಇತ್ತಿದೆ.

★

ಅನುಮೋದನೆ

ನವದೆಹಲಿ— ಭಾರತವು ಹಿಂದೂ ಸಾಗರದಲ್ಲಿ ಅಥವಾ ಭಾರತದ ತೀರದ ಹತ್ತಿರದಲ್ಲಿ ಪೋಲಾರಿಸ್ ಸಭ್ ಮೆರೀನನ್ನು ಇಡಲು ಅನುಮೋದಿಸಿದೆ ಎಂದು ಹಂಡಿರುವ ಸುದ್ದಿಯು ತುದ್ದ ಸುಳ್ಳೆಂದು ವಿದೇಶ ವಿಚಾರ ಮಂತ್ರಿ ಶ್ರೀ ಸ್ವರ್ಣ ಸಿಂಗರು ಹೇಳಿದರು.

★

ಪ್ರಿವಿಲೇಜಿಗೆ ಲೋಪ

ಬೆಂಗಳೂರು— ಶಾಸನಸಭೆಗಳ ಜಂಟಿ ಅಧಿವೇಶನದಲ್ಲಿ ಗೌರ್ನರು ಭಾಷಣ ಮಾಡುತ್ತಿದ್ದಾಗ ವಿರೋಧ ಪಕ್ಷದವರು ಸಭಾಪರಿತ್ಯಾಗ ಮಾಡಿದ ಬಗ್ಗೆ ಬ್ರೀಚ್ ಆಫ್ ಪ್ರಿವಿಲೇಜು ಆಯಿತೆಂದು ಎತ್ತಿರುವ ವಿಷಯಕ್ಕೆ ಸ್ಪೀಕರುರು ಈ ಬಗ್ಗೆ ಬಾಧವಾರ ಎಲ್ಲ ವಿಚಾರವನ್ನು ಕೇಳುವುದಾಗಿ ತಿಳಿಸಿದರು

★

ಅಕ್ರಮ ವಿದೇಶಿ ವಿನಿಮಯ

ಬೊಂಬಾಯಿ— ಆಸ್ಟ್ರೇಲಿಯಾದಿಂದ ಬಂದು ಬ್ರಟನ್ನಿಗೆ ಹೊಂಟಿದ್ದ ಓರೋವಾ ಹಡಗಿನ ಸೌಕಂ ಪೆರೇರಾನ ಕಾಬಿನ್ನಿದ ಲಾಕರನಲ್ಲಿ 51000 ರೂಗಳ ಅಕ್ರಮ ವಿದೇಶಿ ವಿನಿಮಯವನ್ನು ಕಸ್ಟಮ್ಸ್‌ನವರು ವಶಪಡಿಸಿಕೊಂಡು ಅವನನ್ನು ದಸ್ತಗಿರಿ ಮಾಡಿದರು.

ಗೊತ್ತಿದ್ದರೆ ನುಗ್ಗುತ್ತಿರಲಿಲ್ಲ

ಬ್ಯಾಂಗಕಾಕ್— ಥೈಲ್ಯಾಂಡು ಪ್ರಧಾನಿ ಥಾನಾಂ ಕಿಟ್ಟಿಕಚೋರನ ನಿವಾಸಕ್ಕೆ ಒಬ್ಬ ಕಳ್ಳನು ನುಗ್ಗಿ, ಒಂದು ಮೆಷೀನು ಗನ್, ಟ್ರಾನ್ಸಿಸ್ಟರು ರೇಡಿಯೋಗಳು, ಮತ್ತಿತರ ಪದಾರ್ಥಗಳನ್ನು ಕದ್ದು ಹೊಂಟಾಗ ಪಹರೆಯವನ ಕೈಗೆ ಸಿಕ್ಕಿಬಿಟ್ಟನು ; ಇದು ಪ್ರಧಾನಿಯವರ ನಿವಾಸ ಎಂದು ತಿಳಿದಿದ್ದರೆ ನಾನು ಇಲ್ಲಿಗೆ ಬರುತ್ತಿರಲಿಲ್ಲ ಎಂದು ಅವನು ತಿಳಿಸಿದನು

★

ಆನೆಯ ಹುಚ್ಚಾಟ

ವಾರಸಯೋನಿ— ಒಂದು ಪಳಗಿದ ಆನೆಯು ಹುಚ್ಚಾಪಟ್ಟೆ ಓಡಾಡುತ್ತಾ ಲಾಲಬುರಂನಲ್ಲಿ ಒಂದು ಬಸ್ಸನ್ನು ಜಖಂಗೊಳಿಸಿತು: ಅದಕ್ಕೆ ಮುಂಚೆ ಅಕ್ಕಿ ಲಾರಿಯೊಂದರಿಂದ ಒಂದು ಮೂಟೆ ಅಕ್ಕಿ ಎತ್ತಿ, ಸ್ವಲ್ಪ ತಿಂದು ಮಿಕ್ಕಿದ್ದನ್ನು ಬಸ್ಸಿನ ಸತ್ತ ಹಂಡಿತು — ನಂತರ ಕಾಡಿಗೆ ಹೋಯಿತು — ಪೋಲೀಸರು ಅದನ್ನು ಹುಡುಕಿಕೊಂಡು ಹೊಟ್ಟಿದ್ದಾರೆ.

★

ಅವಿಶ್ವಾಸ ಸೂಚನೆ

ಬೆಂಗಳೂರು— ಮಂತ್ರಿಮಂಡಲದ ಮೇಲಿನ ಅವಿಶ್ವಾಸ ಸೂಚನೆ ಚರ್ಚೆಗೆ ಶೀಘ್ರದಲ್ಲೇ ತಾರೀಖನ್ನು ನಿಷ್ಕರ್ಷಿಸಲು ಪ್ರಯತ್ನಿಸುವುದಾಗಿ ಶಾಸನಸಭಾ ಸ್ಪೀಕರರು ನಿನ್ನೆ ತಿಳಿಸಿದರು.

★

ಹತೋಟಿ ಹೋಗುಲ್ಲ

ಮದರಾಸು— ದೇಶದಲ್ಲಿ ಆಹಾರ ಹಂಚಿಕೆ ಇತ್ಯಾದಿ ಹತೋಟಿಗಳನು ತೆಗೆಯುವುದಿಲ್ಲವೆಂದು ಭಾರತ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಹೇಳಿದರು.

ಕೆಂಗಲ್‌ರಿಗೆ ಸಚಿವತ್ವ

ಚಿಕ್ಕಬಳ್ಳಾಪುರದ ಕಾಲೇಜು ಬೋರ್ಡಿನ ಈಚೆಗೆ ನಡೆದ ಮಾಟಿಂಗಿನ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರಿಗೆ ಮೈಸೂರು ಪ್ರಾತಿನಿಧ್ಯವಾಗಿ ಕೇಂದ್ರ ಮಂತ್ರಿಮಂಡಲದಲ್ಲಿ ಸ್ಥಾನಕೊಡುವಂತೆ ವಿನಂತಿಸಲಾಯಿತು : ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ಬಗ್ಗೆ ಶಿಫಾರಸು ಮಾಡಲು ವಿನಂತಿಸಲಾಯಿತು.

★

ಅಕ್ಕಿ ಸಿಗುತ್ತೆ

ಮೈಸೂರು— ಸಕ್ಕರೆ ಗಂಟು ಕಾರ್ಡು ಇರುವವರಿಗೆ, ಬಳಿಕೆದಾರ ಸಹಕಾರ ಸಂಘಗಳು ನ್ಯಾಯ ಬೆಲೆ ಅಂಗಡಿಗಳು ಮತ್ತು ಮುನಿಸಿಪಲ್ ಡಿಪೋಗಳ ಮೂಲಕ್ಕೆ; ಒಂದು ವಾರಕ್ಕೆ ಒಂದು ಯೂನಿಟ್ಟಿಗೆ ಒಂದು ಕೆ ಜಿ ಅಕ್ಕಿಯನ್ನು ಮೈಸೂರು ಜಿಲ್ಲಾಧಿಕಾರಿಗಳು ಏರ್ಪಾಡು ಮಾಡಿರುವರು : ಅಕ್ಕಿಯನ್ನು ಸರಕಾರ ನಿರ್ಧರಿಸುವ ಬೆಲೆಗೆ ಕೊಡಲಾಗುವುದು.

ರೈಲು ಏರ್ಪಾಡು

ಬೆಂಗಳೂರು— ನಾಲ್ಕನೇ ಯೋಜನೆಯಲ್ಲಿ ಮೈಸೂರು ರಾಜ್ಯದಲ್ಲಿ ಅಂಗ ಹೊಸ ರೈಲ್ವೇ ಲೈನುಗಳನ್ನು ಹಾಕಲು ಕೇಂದ್ರವನ್ನು ಮೈಸೂರು ಸರಕಾರ ಒತ್ತಾಯ ಮಾಡಿದೆ

★

ನಾಗಪುರ— ಅಂ ಎಸ್ ಎಸ್ ಗೆ ಕಳುಹಿಸಿದ ಸಂದೇಶದಲ್ಲಿ, ಸೇವಾಳ ರಾಜ ಮಹೇಂದ್ರರು— ಮಾನವೀಕತೆಯು ಹಾಳಾಗುವ ಕಡೆ ನುಗ್ಗುತ್ತಿದೆ ಮತ್ತು ತಮ್ಮಲ್ಲಿ ದ್ವೇಷ ಹೊಡೆದಾಟದಲ್ಲಿ ಸಿಕ್ಕಿಬಿದ್ದಿತೆ ಇಂತಹ ಭೀಕರಪರಿಸ್ಥಿತಿಯಿಂದ ಹಿಂದೂ ಧರ್ಮದ ಅತ್ಯುನ್ನತ ಭಾವನೆಗಳು ಮಾತ್ರ ರಕ್ಷಿಸಬಲ್ಲವು.

ಬೊಜ್ಜು ಬೆಳಸಿರುವವರು ಮಾತ್ರ ಓದಿ !

ಒಬ್ಬರು ಜರ್ಮನಿಯ ವಕೀಲರಾದ ಹೆಲ್ಮಟ್ ಎಂಬುವರು : ಯಾವಾಗಲೂ ನ್ಯಾಯಶಾಸ್ತ್ರಗಳನ್ನು ಎದುರಿಗೆ ಇಟ್ಟುಕೊಂಡು, ಓದಿ ಓದಿ, ಅದರಲ್ಲಿಯೇ ಮುಳುಗಿಹೋಗಿ, ದೇಹದ ಸಮತೋಲನ ಕಳೆದುಕೊಂಡರು ; ಪಚನ ಶಕ್ತಿ ಕಳೆದುಕೊಂಡರು ; ಇಷ್ಟೆಲ್ಲಾ ಕಳೆದುಕೊಂಡು ಒಂದು ಮಾತ್ರ ಹೆಚ್ಚುತ್ತಾ ಒಂದು : ಅದೇ ಬೊಜ್ಜು ! ಡಾಕ್ಟರ ಬಳಿ ಹೋದರು ; ತಕ್ಷಣದಲ್ಲೇ ಬೊಜ್ಜು ಕರಗಿಸುವಂತಹ ಔಷಧ ಇಲ್ಲವೆಂದೂ, ದೇಹಶ್ರಮದ ಕೆಲಸಗಳನ್ನು ಕೈಗೊಂಡರೆ ಕ್ರಮೇಣ ಅದು ಸರಿಹೋಗುವುದೆಂದೂ ಅವರು ಸಲಹೆ ಮಾಡಿದರು ; ಅದೇ ಊರಿನಲ್ಲಿ ನಾಲ್ಕು ಜನರಿದ್ದರಿಗೆ ಹೊಸದಾಗಿ ವ್ಯಾಯಾಮಶಾಲೆಗಳಿಗೆ ಹೋಗಿ ದಂಡೆ ಒತ್ತುವುದಕ್ಕೆ ಅವರಿಗೆ ನಾಚಿಕೆ !

ತಕ್ಷಣವೇ ಶಮ್ಮ ಬೆಲೆ ಬಾಳುವ ಕಾರನ್ನೇರಿ ಅವರು ಬಹು ದೂರ ಸಾಗಿ ಹೋದರು : ಕಾಡೊಂದರ ಒಳ ಕಾರನ್ನು ನಿಲ್ಲಿಸಿ, ಅಲ್ಲಿದ್ದ ಫಾರೆಸ್ಟ್ ರೇಂಜರ ಬಂಗಲೆಗೆ ಅವರು ಧಾವಿಸಿದರು ; ಆ ರೇಂಜರು ಅವರ ಸ್ನೇಹಿತರು : ಕೆಲ ದಿನಗಳವರೆಗೆ ನಿಮ್ಮ ಕಾಡಿನಲ್ಲಿ ಮಲಗಡಿಯಲು ನನಗೆ ಅಪ್ಪಣೆ ಕೊಡಬೇಕು, ಎಂದು ಕೇಳಿದನು : ವಕೀಲರ ಅಂತಸ್ತನ್ನು ತಿಳಿದಿದ್ದ ರೇಂಜರು ಮೊದಲು ಒಪ್ಪಲಿಲ್ಲ ; ಕೊನೆಗೆ ವಕೀಲರ ಆಗ್ರಹ ಹೆಚ್ಚಿದಾಗ ಬೇರೆ ಮಾರ್ಗವಿಲ್ಲದೆ ಅವರಿಗೆ ಅನುಮತಿ ಕೊಡಲಾಯಿತು ; ಆದರೆ ಅದೇ ಕಾಲದಲ್ಲಿ ರೇಂಜರಿಗೆ ಹೊಸ ಉಪಾಯವೊಂದು ಹೊಳೆಯಿತು ; ಎಂದೂ ಆ ಕಾಡಿನಲ್ಲಿ ಮಲಗಡಿಯುವ ಕೆಲಸಗಾರರ ಅಭಾವ ವಿಪರೀತವಾಗಿತ್ತು ; ವಕೀಲರು ಬಂದ ಕಾರಣವನ್ನು ಅರಿತೊಡನೆ ಅವನು ಪ್ರಮುಖ ಪತ್ರಿಕೆಗಳಿಗೆ ಜಾಹೀರಾತೊಂದನ್ನು ನೀಡಿದ

'ಕೂಲಿ ಕೆಲಸ ಮಾಡಿ ಬೇಸರವಾಗಿದೆಯೇನು ? ಹಾಗಿದ್ದರೆ ನಮ್ಮ ಕಾಡಿಗೆ ಬಂದು ಮಲಗಡಿಯುವುದರಿಂದ ಸಂಪಾದನೆಯೊಂದಿಗೆ ಆರೋಗ್ಯವನ್ನೂ ಕೊಂಡು ಹೋಗಿರಿ !' ಎಂಬುದೇ ಆ ಜಾಹಿರಾತು : ಒಡನೆಯೇ ರೇಂಜರು ಕನಸಿನಲ್ಲೂ ಕಾಣದ ಫಲ ದೊರಕಿಬಿಟ್ಟಿತು ; ನೂರಾರು ಅರ್ಜಿಗಳು ಧಾವಿಸಿ ಬರತೊಡಗಿದವು : ಅವುಗಳ ಹಿಂದೆಯೇ ಅಭ್ಯರ್ಥಿಗಳು ಲಿಮೊಸಿನ್, ಕ್ಯಾಡಿಲಾಕ್ ಕಾರುಗಳಲ್ಲಿ ಹಿಡಿಬಂದರು. ಏರೋಪ್ಲೇನುಗಳಲ್ಲಿ ಹಾರಿಬಂದವರೂ ಉಂಟು. ಕಾರಿಲ್ಲದೆ, ಪ್ಲೇನಿನಲ್ಲಿ ಬಾಲು ಸಾಧ್ಯವಿಲ್ಲದವರು ರೈಲುಗಳಲ್ಲಿ ಕುಳಿತು ಬಂದರು : ತುಡತುಡವಾಗಿ ಬಂದವರನ್ನು ಕಂಡು ಅಲ್ಲಿದ್ದ ಕೆಲಸಗಾರರು ಬೆರಗಾಗಿ ಹೋದರು. (ಯೂ ಪಿ ಎಸ್)

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ಹಾಯಿದೆ ಮುಗಿದಿರುವವರು ದಯಮಾಡಿ ಪಾವತಿಮಾಡಬೇಕಾಗಿ ವಿನಂತಿ

ಶ್ರೀ ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಜೆ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು

ವುಡ್‌ಲ್ಯಾಂಡ್ಸ್ ವೈಭವ 6 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) April Fool

ಸೈರಾಬಾನು, ದಿಶ್ವಜಿತ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕು ನಲಿಸುವ ಹಾಸ್ಯ ವಿನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಲ್ಲಾಸಿಕ ಕಲಾಕೃತಿ.
– ಸುಬೋಧ ಮುಖರ್ಜಿಯವರ ಅವೋಸಿಯ ಈಸ್ಟ್‌ಮೆನ್ ಕಲರ್ ಚಿತ್ರ –

ಸಂಗೀತ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 15-1-65 ರಿಂದ

ಬೊಬ್ಬಲಿ ಯುದ್ಧಮು [ತೆಲುಗು]

ಪಾತ್ರ— ಎನ್ ಟಿ ರಾಮರಾವ್, ಭಾನುಮತಿ, ಎಂ ಆರ್ ರಾಧಾ, ಜಮುನಾ ವಿಜಯಲಕ್ಷ್ಮಿ, ರಾಜನಾಲಾ, ಎಸ್ ವಿ ರಂಗರಾವ್ [ದಿನ 3 ಆಟಗಳು]

SHAKTI SUDHA

Superb Tonic

ಆಶೋಕಾ ಏಜೆನ್ಸೀಸ್

ಲ್ಯಾನ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Help The 'Gorakshana'

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದ್ದೆ

"ಗೋರಕ್ಷಣ" ಕ್ಕೆ ಚಂದಾಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4